

ಇಂಗ್ಲಿಷ್ ಅರ್ಥ ಹೇಳಿ ಕಲಿಸುವ ಪೋಷಕರು ಅದಕ್ಕೆ ಸಮಾನಾರ್ಥಕವಾದ ಮತ್ತೊಂದು ಕನ್ನಡ ಪದಗಳನ್ನು ಪರಿಚಯಿಸುವ ಪ್ರಯತ್ನ ಮಾಡಬಹುದು. ಬಹುಶಃ ಗ್ರಾಮೀಣ ಪ್ರದೇಶಗಳಲ್ಲಿ ಈ ವಿಚಾರದಲ್ಲಿ ನಾವು ಮತ್ತೆ ಸೋಲುತ್ತೇವೆ. ಕಾರಣ ಮತ್ತದೇ ಅನಕ್ಷರತೆ, ಸಮಯದ ಕೊರತೆ, ಎಲ್ಲವನ್ನೂ ಶಾಲೆಯೇ ಕಲಿಸುತ್ತದೆ ಎನ್ನುವ ಇಲ್ಲಿನ ಪೋಷಕರಿಂದ ನಾವು ಏನನ್ನೂ ನಿರೀಕ್ಷಿಸಲಾಗದು.

ಹಾಗಾದರೆ ಸಮಸ್ಯೆಗೆ ಪರಿಹಾರ? ಅದೇ ಪ್ರಾಥಮಿಕ ಶಾಲಾ ಹಂತ. ಹೌದು ಈ ಹಂತಗಳಲ್ಲಿ ಕನಿಷ್ಠ ಏಳನೇ ತರಗತಿ ತಲುಪುವುದರೊಳಗೆ ಸಾಧ್ಯವಾದಷ್ಟು ಕನ್ನಡದ ಸಾಮಾನ್ಯ ಬಳಕೆಯ ಸಮಾನಾರ್ಥಕ ಪದಗಳ ಪರಿಚಯ ಮಾಡಿಕೊಡಬೇಕಾದದ್ದು ಅಗತ್ಯ. ಕನ್ನಡದ ಅಕ್ಷರಗಳನ್ನು, ಪದಗಳನ್ನು ಬರೆಯುವುದು, ಓದುವುದು ಇತ್ಯಾದಿಗಳ ಕಲಿಕೆ ಒಂದನೇ ತರಗತಿಯಿಂದ ಪ್ರಾರಂಭಗೊಳ್ಳುತ್ತದೆ. ಮುಂದಿನ ತರಗತಿಗಳಿಗೆ ಹೋದಂತೆಲ್ಲಾ ಮಾತೃಭಾಷೆಯ ಕಲಿಕೆ ಸುಲಲಿತವಾಗುತ್ತಾ ಹೋದಂತೆ, ಅದನ್ನು ಪ್ರೀತಿಯಿಂದ ಕಲಿಯುವ ಮನಸ್ಥಿತಿ ಮಗುವಿಗೆ ಮೂಡಬೇಕು.

ಇದು ಕೇವಲ ಶಿಕ್ಷಕರಿಂದಲೇ ಪೂರ್ಣಗೊಳ್ಳುವುದು ಕಷ್ಟ ಸಾಧ್ಯ. ಆದರೆ ಅವರಿಂದ ಒಂದು ಪ್ರಯತ್ನವಾಗಬಹುದು. ಏಕೆಂದರೆ ಉನ್ನತ ತರಗತಿಗೆ ಮಗು ಹೋದಂತೆ ಶೈಕ್ಷಣಿಕ ವರ್ಷದ ನಿಗದಿತ ವಿವಿಧ ವಿಷಯಗಳನ್ನು ಕಲಿಸುತ್ತಾ, ಪಠ್ಯಸೂಚಿ ಮುಗಿಸುತ್ತಾ ಕನ್ನಡದ ಪದಗಳ ಮೂಲ ಅರ್ಥಗಳನ್ನು ಕಲಿಸುವುದು ಕ್ಲಿಷ್ಟ. ಆದರೂ ಶಿಕ್ಷಕರ ಈ ಒಂದು ಪ್ರಯತ್ನ ಆ ಮಗುವಿನ ಕಲಿಕೆಯ ತಳಹದಿಗೆ ಭದ್ರಬುನಾದಿಯಾಗುವುದು ಖಂಡಿತ. ಜೊತೆಗೆ ಮಾಧ್ಯಮ, ಸಮುದಾಯ, ಪೋಷಕರು, ಶಿಕ್ಷಕ ಎಲ್ಲರೂ ಪ್ರಯತ್ನಿಸಿದಲ್ಲಿ ಇದೊಂದು ಉತ್ತಮ ಕಲಿಕಾ ಮಾರ್ಗ.

ಪ್ರಾಥಮಿಕ ಹಂತದ ಕಲಿಕೆಯಲ್ಲಿ ಮಾತೃಭಾಷೆ ಕಡ್ಡಾಯ ಎನ್ನುವ ಕವಿಗಳು, ವಿಮರ್ಶಕರು, ಬುದ್ಧಿಜೀವಿಗಳು, ಸಂಘಟನೆಗಳು ಈ ವಿಚಾರದಲ್ಲಿ ಒಂದಿಷ್ಟು ಚಿಂತನೆ ಮಾಡುವುದು ಒಳಿತು. ಕನ್ನಡ ಮೂಲ ಪದಗಳ, ಪ್ರಬುದ್ಧ ಪದಗಳ ಬಳಕೆಯ ವಿಚಾರ ದೊಡ್ಡವರ ಪಾಲಿಗೆ ತೀರಾ ಸಣ್ಣದು ಎನಿಸಿದರೂ ಬೋಧನಾ –ಕಲಿಕಾ ಪ್ರಕ್ರಿಯೆಯಲ್ಲಿ ಇದೊಂದು ಮಹತ್ವದ ಬೆಳವಣಿಗೆ. ಜೊತೆಗೆ ಮಾತೃಭಾಷೆ ಉಳಿಯಲು ಮಾಡಬಹುದಾದ ಒಂದು ಅದ್ಭುತ ಪ್ರಯತ್ನ. ಜೊತೆಗೆ ವಿದ್ಯಾರ್ಥಿಗಳಿಂದ ಕಂಠಪಾಠ ವಿಧಾನದ ಕಲಿಕೆಯನ್ನು ಮುಕ್ತಗೊಳಿಸುವ ಒಂದು ಹಂತವೂ ಆಗಬಹುದು.

ಮಗು ಮಾತೃಭಾಷೆಯನ್ನು ಆಲಿಸುತ್ತಲೇ ಮಾತನಾಡಲು ಕಲಿಯುವ ಸಾಮರ್ಥ್ಯ ಹೊಂದಿರುತ್ತದೆ. ಕನ್ನಡವನ್ನು ತಾಯಿಯಂತೆ ಪ್ರೀತಿಸುತ್ತಾ ಮಾತನಾಡುವುದನ್ನು ನಾವು ಕಲಿಸಬೇಕು. ಆಗ ಸಹಜವಾಗಿ ಭಾಷಾ ಕೌಶಲ್ಯ ಮಗುವಿಗೆ ಬೆಳವಣಿಗೆಯಾಗುತ್ತಾ ಹೋಗುತ್ತದೆ. ಈ ಭಾಷಾ ಕೌಶಲ್ಯದ ಸಂವರ್ಧನೆ ವಿಜ್ಞಾನ, ಗಣಿತ ಹಾಗೂ ಇತರ ವಿಷಯಗಳ ಕಲಿಕೆ ಒಂದು ಪೂರಕ ವಸ್ತುವೆಂದು ನಾವು ಗಂಭೀರವಾಗಿ ಪರಿಗಣಿಸಬಹುದು. ನಮ್ಮ ಭಾಷೆಯನ್ನೇ ಸಂಪೂರ್ಣವಾಗಿ ಕಲಿಯದ ನಾವು ಎಲ್ಲಾ ಭಾಷೆಗಳ ಮೇಲೆ ಪ್ರಭುತ್ವ ಸಾಧಿಸುತ್ತೇವೆಂಬ ಧಾವಂತದಲ್ಲಿರುವುದು ನಮ್ಮ ಮೂರ್ಖತನದ ಪರಮಾವಧಿಯೇ ಸರಿ.